**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 27-05-2024.**

**ಮುಖ್ಯ ವಿಚಾರಣೆ - ವಾದಿಯ ಪರ ವಕೀಲರಿಂದ :**

**1)** ಈ ದಿನ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ಅದರಲ್ಲಿ ಹೇಳಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸಿ ಸಾಕ್ಷಿ ನುಡಿಯುತ್ತಿದ್ದೇನೆ.

**2)** ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

**3)** ವಿಶೇಷ ಅಧಿಕಾರ ಪತ್ರವನ್ನು - ನಿ.ಪಿ.1 ಎಂದು, ಕ್ರಯದ ಕರಾರು ಪತ್ರ ದಿ.24-05-2008 ರ ಮೂಲ ದಾಖಲೆಯನ್ನು - ನಿ.ಪಿ.2 ಎಂದು, ಕ್ರಯದ ಕರಾರು ಪತ್ರ ದಿ.14-12-2004 ರ ಮೂಲ ದಾಖಲೆಯನ್ನು - ನಿ.ಪಿ.3 ಎಂದು, ಕ್ರಯದ ಕರಾರು ಪತ್ರ ದಿ.03-05-2006 ರ ಮೂಲ ದಾಖಲೆಯನ್ನು ಪತ್ರ ದಿ.28-09-2006 ರ ಜೊತೆಯಲ್ಲಿ - ನಿ.ಪಿ.4 ಎಂದು, ಕ್ರಯದ ಕರಾರು ಪತ್ರ ದಿ.13-09-2007 ರ ಮೂಲ ದಾಖಲೆಯನ್ನು - ನಿ.ಪಿ.5 ಎಂದು, ಕ್ರಯದ ಕರಾರು ಪತ್ರ ದಿ.19-02-2021 ರ ಮೂಲ ದಾಖಲೆಯನ್ನು - ನಿ.ಪಿ.6 ಎಂದು, ಋಣಭಾರ ಪ್ರಮಾಣ ಪತ್ರವನ್ನು - ನಿ.ಪಿ.7 ಎಂದು, ಕಾನೂನು ನೋಟೀಸು ದಿ.11-01-2023 ರ ಕಛೇರಿಯ ಪ್ರತಿಯನ್ನು - ನಿ.ಪಿ.8 ಎಂದು, 20 ಅಂಚೆ ರಶೀದಿಗಳನ್ನು ಒಟ್ಟಾಗಿ - ನಿ.ಪಿ.9 ಎಂದು, 9 ಅಂಚೆ ಸ್ವೀಕೃತಿಗಳನ್ನು - ನಿ .ಪಿ.10 ರಿಂದ ನಿ.ಪಿ.18 ಎಂದು, ಎರಡು ಜಾರಿಯಾಗದೇ ವಾಪಸ್ಸು ಬಂದಿರುವ ಅಂಚೆ ಲಕೋಟೆಗಳನ್ನು -ನಿ.ಪಿ.19 ಮತ್ತು ನಿ.ಪಿ.20 ಎಂದು, ಸದರಿ ಲಕೋಟೆಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ನೋಡಲಾಗಿ ಅದರಲ್ಲಿರುವ ನೋಟೀಸಿನ ಪ್ರತಿಗಳನ್ನು - ನಿ.ಪಿ.19(ಎ) ಮತ್ತು 20(ಎ) ಎಂದು, ದಾವಾಸ್ವತ್ತಿನ ಎರಡು ಪಹಣಿ ಪತ್ರಿಕೆಗಳನ್ನು - ನಿ.ಪಿ.21 ಮತ್ತು ನಿ.ಪಿ.22 ಎಂದು ಗುರುತಿಸಲಾಯಿತು.

**(ಮುಂದುವರೆದ ಮುಖ್ಯ ವಿಚಾರಣೆಗೆ ವಾದಿಗಳ ಪರ ವಕೀಲರು ಕಾಲಾವಕಾಶವನ್ನು ಕೋರಿರುವುದರಿಂದ, ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು).**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**